# ಕರ್ನಾಟಕ ಸರ್ಕಾರ

ಸಂಖ್ಯೆ:ಆರ್‌ಡಿ:48:ಎಲ್‌ಜಿಪಿ:2003.

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:29-01-2004.

## ಸುತ್ತೋಲೆ

ವಿಷಯ:- ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಸಿ ಅಡಿ ಸರ್ಕಾರಿ ಜಮೀನು:ಗೋಮಾಳ ಜಮೀನಿನಲ್ಲಿ ಅನಧಿಕೃತ ವಾಸದ ಮನೆ ನಿರ್ಮಾಣ ಸಕ್ರಮೀಕರಣಗೊಳಿಸುವ ಬಗ್ಗೆ ಸ್ಪಷ್ಟೀಕರಣ ಕುರಿತು.

ಉಲ್ಲೇಖ:- 1. ಜಿಲ್ಲಾಧಿಕಾರಿಗಳು, ಉಡುಪಿ ಇವರ ಪತ್ರ ಸಂ:ಎನ್‌ಸಿಆರ್:ಸಿಆರ್:93:2003-04, ದಿನಾಂಕ:01-07-2003.

2. ಸರ್ಕಾರಿ ಸುತ್ತೋಲೆ ಸಂ:ಆರ್‌ಡಿ:57:ಎಲ್‌ಜಿಪಿ:2001. ದಿನಾಂಕ:19-12-2001.

--:0:--

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(2)ರ ಸುತ್ತೋಲೆಯ ಕಡೆಗೆ ಗಮನ ಸೆಳೆಯಲಾಗಿದೆ.

ಗೋಮಾಳ ಜಮೀನಿನಲ್ಲಿ ಅಕ್ರಮ ಸಾಗುವಳಿಗಾಗಿ ನಮೂನೆ 50 ಮತ್ತು 53 ರಲ್ಲಿ ಅರ್ಜಿ ಹಾಕಿಕೊಂಡಿದ್ದಲ್ಲಿ ಅಂತಹ ಅರ್ಜಿಗಳನ್ನು ಸಕ್ರಮಗೊಳಿಸಲು ಸಮಿತಿ ತೀರ್ಮಾನಿಸಿದ್ದಲ್ಲಿ, ಗೋಮಾಳ ಜಮೀನಿಗೆ ಸಂಬಂಧಿತ ರಿಟ್ ಅರ್ಜಿ ಸಂ:25310:01ರ ಅಂತಿಮ ತೀರ್ಪಿಗೆ ಬದ್ಧರಾಗುವ ಷರತ್ತಿಗೆ ಒಳಪಡಿಸಿ, ಸಕ್ರಮೀಕರಣ ಆದೇಶ ಹೊರಡಿಸುವಂತೆ ಉಲ್ಲೇಖ(2)ರ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಅದೇ ರೀತಿ ಗೋಮಾಳ ಜಮೀನಿನಲ್ಲಿ ಅನಧಿಕೃತ ವಾಸದ ಮನೆ ನಿರ್ಮಾಣ ಮಾಡಿಕೊಂಡಿದ್ದಲ್ಲಿ ಹಾಗೂ ಅಂತಹ ನಿವೇಶನ ಸಕ್ರಮೀಕರಣ ಕೋರಿ ನಿಯಮಾನುಸಾರ ನಿಗದಿತ ನಮೂನೆಯಲ್ಲಿ ಅರ್ಜಿ ಹಾಕಿಕೊಂಡಿದ್ದಲ್ಲಿ, ಸದರಿ ಅರ್ಜಿಗಳನ್ನು ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂ ಮಂಜೂರಾತಿ ನಿಯಮಗಳು 1999ರ ಅನ್ವಯ ಪರಿಗಣಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದೆ. ಗೋಮಾಳ ಜಮೀನಿನಲ್ಲಿ ಅನಧಿಕೃತವಾಗಿ ವಾಸದ ಮನೆ ನಿರ್ಮಾಣ ಮಾಡಿಕೊಂಡಿರುವ ಜಮೀನುಗಳನ್ನು ಸಕ್ರಮೀಕರಿಸಿ, ಹೊರಡಿಸುವ ಆದೇಶದಲ್ಲಿ ಸದರಿ ಆದೇಶವು ನ್ಯಾಯಾಲಯದಲ್ಲಿ ಬಾಕಿ ಇರುವ ರಿಟ್ ಅರ್ಜಿ ಸಂ:25310:01 ರಲ್ಲಿನ ಅಂತಿಮ ತೀರ್ಪಿಗೆ ಒಳಪಟ್ಟಿರುವುದೆಂದು ಷರತ್ತು ವಿಧಿಸುತ್ತಿರುವಂತೆ ಗೋಮಾಳ ಜಮೀನಿನಲ್ಲಿ ಅಕ್ರಮ ಮನೆ ನಿರ್ಮಾಣ ಸಕ್ರಮ ಪ್ರಕರಣಗಳಲ್ಲಿ ಸಹ ಈ ನಿಬಂಧನೆಯನ್ನು ಸಕ್ರಮೀಕರಣ ಆದೇಶದಲ್ಲಿ ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ.

(ಹೆಚ್.ಗಣೇಶ ಮೂರ್ತಿ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ.ಮಂ).

2/2/04

ಇವರಿಗೆ,

1. ಎಲ್ಲಾ ಜಿಲ್ಲಾಧಿಕಾರಿಗಳು,

2. ಎಲ್ಲಾ ಉಪ ವಿಭಾಗಾಧಿಕಾರಿಗಳು }
ಎಲ್ಲಾ ತಹಶೀಲ್ದಾರರು }

ಜಿಲ್ಲಾಧಿಕಾರಿಗಳ ಮತ್ತು ಜಿಲ್ಲಾಧಿಕಾರಿಗಳವರ ಕಛೇರಿ ಹಾಸನ ಜಿಲ್ಲೆ, ಹಾಸನ. ದಿನಾಂಕ 11/2/04

ನಂ. ಎಲ್. ಎನ್.ಡಿ (1) 542 103-04;

19/2/04